ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

ಮಂಗಳವಾರ ದಿನಾಂಕ ೧೧ನೇ ಫೆಬ್ರವರಿ ೧೯೮೬, ಮಾಘ ೨೨, ೧೯೦೭ ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧ ಗಂಟೆಗೆ ಸಮಾವೇಶಗೊಂಡಿತು.

[ಮಾನ್ಯ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್‌ರವರು) ಪೀಠವನ್ನು ಅಲಂಕರಿಸಿದರು]

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಮಾತಿನ ಮೂಲಕ ನೀಡಲಾದ ಉತ್ತರಗಳು

ಶಾಸಕರು ಹಾಗೂ ಲೋಕಸಭಾ ಸದಸ್ಯರುಗಳು ಕಛೇರಿಗಳಿಗೆ ಬಂದಾಗ ಅಧಿಕಾರಿಗಳು ವರ್ತಿಸುವ ಬಗ್ಗೆ

೧೧೦೮. ಶ್ರೀ ಆರ್. ಎನ್. ನಾಯ್ಕ (ಭಟ್ಕಳ್).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಾಸಕರುಗಳು ಹಾಗೂ ಲೋಕ ಸಭೆಯ ಸದಸ್ಯರುಗಳು ಸಾರ್ವಜನಿಕ ಕೆಲಸ ಕಾರ್ಯದ ಉದ್ದೇಶದಿಂದ, ಸರಕಾರಿ ಕಛೇರಿಗಳಿಗೆ ಬಂದಾಗ ಅವರ ಜೊತೆ, ಅಧಿಕಾರಿಗಳು, ಹೇಗೆ ವರ್ತಿಸಬೇಕೆಂ ಎನ್ನುವುದರ ಬಗ್ಗೆ ಸರಕಾರಿ, ನಿಯಮಗಳೇನಾದರೂ ಹೊರಡಿಸಲಾಗಿದೆಯೆ,

ಆ) ಕೇಂದ್ರ ಸರ್ಕಾರದವರು ಅಂಥ ಆದೇಶ ಹೊರಡಿಸಿದ್ದು ಅದು ರಾಜ್ಯ ಸರ್ಕಾರದವರ ಗಮನಕ್ಕೆ ಬಂದಿದೆಯೆ, ಹಾಗಿದ್ದಲ್ಲಿ ಆದೇಶದ ಸಾರಾಂಶವೇನು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಅ) ಹೌದು. ಆದೇಶಗಳನ್ನು ಹೊರಡಿಸಿದೆ.

ಆ) ಕೇಂದ್ರ ಸರಕಾರದ ಆದೇಶದ ಪ್ರತಿಗಳು ತಕ್ಷಣ ಲಭ್ಯವಿಲ್ಲ.

ಶ್ರೀ ಆರ್. ಎನ್. ನಾಯಕ್.—ಆದೇಶದ ಪ್ರತಿಗಳನ್ನು ಶಾಸಕರುಗಳಿಗೆ ಪೂರೈಸಲಾಗಿದೆಯೇ ? ಆ ರೀತಿ ಪೂರೈಸದಿದ್ದರೆ ಎಂದು ಪೂರೈಸಲಾಗುವುದು ? ಆ ಆದೇಶದ ಮುಖ್ಯಾಂಶಗಳನ್ನು ಮಾನ್ಯ ಮುಖ್ಯಮಂತ್ರಿಗಳು ಸಭೆಗೆ ತಿಳಿಸುವರೆ ? ಮತ್ತು ಅಧಿಕಾರಿಗಳು ಶಾಸಕರುಗಳಿಗೆ ಅಥವಾ ಲೋಕಸಭಾ ಸದಸ್ಯರುಗಳಿಗೆ ಅವರ ಕಛೇರಿಗಳಿಗೆ ಹೋದಾಗ ಅಗೌರವದಿಂದ ವರ್ತಿಸಿದ್ದುದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿದೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಅವರ ಕೊನೆಯ ಪ್ರಶ್ನೆಗೆ ಮೊದಲನೆಯ ಉತ್ತರವೇನೆಂದರೆ, ಆ ರೀತಿಯ ವಿಚಾರ ನಮ್ಮ ಗಮನಕ್ಕೆ ಬಂದಿಲ್ಲ. ಇಲ್ಲಿಯವರೆವಿಗೆ ಏನು ಆದೇಶಗಳನ್ನು ಹೊರಡಿಸಿದ್ದೇವೆ, ಅವುಗಳ ಪ್ರತಿಗಳನ್ನು ಈ ಸಭೆಯ ಟೇಬಲ್ ಮೇಲೆ ಇಡಲಾಗುವುದು. ಆದಷ್ಟು ತೀವ್ರವಾಗಿ ಅದನ್ನು ಎಲ್ಲಾ ಮಾನ್ಯ ಸದಸ್ಯರುಗಳಿಗೂ ಹಂಚಲಾಗುವುದು. ಅದರ ಸಾರಾಂಶ ಏನು ಎಂಬುದಾಗಿ ಮಾನ್ಯ ಸದಸ್ಯರು ಕೇಳಿದ್ದಾರೆ. ಅದರ ಸಾರಾಂಶವೇನೆಂದರೆ, ಲೋಕ ಸಭಾ ಸದಸ್ಯರುಗಳು, ಹಾಗೂ ಶಾಸಕರುಗಳೂಡನೆ ಸರ್ಕಾರಿ ನೌಕರರು ಸೌಜನ್ಯದಿಂದ ವರ್ತಿಸಬೇಕು. ಅವರ ಹೇಳಿಕೆಗೆ, ಕೆಲಸ ಕಾರ್ಯಗಳಿಗೆ

ಗಮನ ಕೊಟ್ಟು ಅವುಗಳನ್ನು ಇತ್ಯರ್ಥ ಮಾಡುವುದರಲ್ಲಿ ಸರ್ಕಾರಿ ನೌಕರರು ಜಾಗರೂಕತೆಯಿಂದ ವರ್ತಿಸಬೇಕು. ಲೋಕ ಸಭಾ ಸದಸ್ಯರು ಹಾಗೂ ಶಾಸಕರುಗಳು ಸೂಚಿಸುವಂತಹ ಕಾರ್ಯಗಳನ್ನು ಪೂರೈಸುವಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಅವರು ನೆರವಾಗಬೇಕು. ಇದನ್ನು ಪ್ರತಿಯೊಬ್ಬ ಅಧಿಕಾರಿಯೂ ಗಮನದಲ್ಲಿಟ್ಟುಕೊಳ್ಳಬೇಕು. ಒಂದು ವೇಳೆ ಸದಸ್ಯರು ನೀಡಿದಂತಹ ಸಲಹೆಗಳನ್ನು ಇತ್ಯರ್ಥ ಮಾಡಲು ಅಸಾಧ್ಯವಾದಂತಹ ಸಂದರ್ಭದಲ್ಲಿ ತುಂಬಾ ವಿನಯದಿಂದ ಕಾರ್ಯಗತ ಮಾಡಲಾಗದಿರುವುದಕ್ಕೆ ಇರುವಂತಹ ಕಾರಣಗಳನ್ನು ಆ ಅಧಿಕಾರಿ ವಿವರಿಸಬೇಕು. ಲೋಕಸಭಾ ಸದಸ್ಯರು ಮತ್ತು ಶಾಸಕರುಗಳ ಸಂದರ್ಶನಕ್ಕೆ ಆದ್ಯತೆಯನ್ನು ಕೊಡಬೇಕು. ಲೋಕಸಭಾ ಸದಸ್ಯರು ಮತ್ತು ಶಾಸಕರುಗಳು ಒಬ್ಬ ಅಧಿಕಾರಿಯನ್ನು ನೋಡಲು ಬಂದಾಗ ಆ ಅಧಿಕಾರಿ ಎದ್ದು ನಿಂತು ಅವರನ್ನು ಬರಮಾಡಿಕೊಳ್ಳಬೇಕು. ಮತ್ತು ಅವರು ಹೋಗುವಾಗಲೂ ಅಷ್ಟೆ.

ಸರ್ಕಾರದ ಕಾರ್ಯದರ್ಶಿಗಳು, ಉಪ ಕಾರ್ಯದರ್ಶಿಗಳು, ವಿಭಾಗಾಧಿಕಾರಿಗಳು, ಜಿಲ್ಲಾಧಿಕಾರಿಗಳು, ಇಲಾಖಾ ಮುಖ್ಯಸ್ಥರುಗಳು ಹಾಗೂ ಇನ್ನಿತರೆ ಉಚ್ಚ ಮಟ್ಟದ ಅಧಿಕಾರಿಗಳು ಪ್ರತಿ ದಿನ ಸಂಜೆ ಕಛೇರಿ ನಡೆಯುವ ದಿವಸ ೫.೦೦ ಗಂಟೆಯಿಂದ ೬.೦೦ ಗಂಟೆಯವರೆಗೆ ಸಾರ್ವಜನಿಕರಿಗೆ, ಲೋಕ ಸಭಾ ಸದಸ್ಯರುಗಳಿಗೆ ಹಾಗೂ ಶಾಸಕರುಗಳಿಗೆ ಸಂದರ್ಶನವನ್ನು ನೀಡಲು ಅನುಕೂಲವಾಗುವ ಹಾಗೆ ತಮ್ಮ ಕೆಲಸ ಕಾರ್ಯಗಳನ್ನು ಹೊಂದಾಣಿಕೆ ಮಾಡಿಕೊಳ್ಳಬೇಕೆಂದು ಹೇಳಲಾಗಿದೆ. ಮಾನ್ಯ ಮಂತ್ರಿಗಳು ಮಂತ್ರಿಗಳ ಆಪ್ತ ಕಾರ್ಯದರ್ಶಿಗಳು, ಆಪ್ತ ಸಹಾಯಕರುಗಳು ಶಾಸಕರೊಡನೆ ವರ್ತಿಸುವ ಬಗ್ಗೆ ಈ ರೀತಿ ಸೂಚಿಸಲಾಗಿದೆ. ಶಾಸಕರುಗಳು ಸಂದರ್ಶನಕ್ಕಾಗಿ ಮಂತ್ರಿಗಳ ಬಳಿಗೆ ಹೋದಾಗ ಅವರ ಆಪ್ತ ಕಾರ್ಯದರ್ಶಿಗಳು ಹಾಗೂ ಆಪ್ತ ಸಹಾಯಕರುಗಳು ಅವರನ್ನು ಸೌಜನ್ಯದಿಂದ ಬರಮಾಡಿಕೊಂಡು ಕುಳಿತುಕೊಳ್ಳಲು ಆಸನವನ್ನು ಒದಗಿಸಿಕೊಡುವುದಲ್ಲದೆ ಬಂದಿರುವಂತಹ ವಿಷಯವನ್ನು ಮಂತ್ರಿಗಳ ಗಮನಕ್ಕೆ ತರಬೇಕು. ಮತ್ತು ಮಂತ್ರಿಗಳ ಕಾರ್ಯಕ್ರಮಗಳನ್ನು ಗಮನದಲ್ಲಿಟ್ಟುಕೊಂಡು ಆದಷ್ಟು ಬೇಗನೆ ಅವರ ಸಂದರ್ಶನಕ್ಕೆ ಅವಕಾಶವನ್ನು ಒದಗಿಸಿಕೊಡಬೇಕು. ಇವಿಷ್ಟು ಆದೇಶಗಳನ್ನು ನೀಡಲಾಗಿದೆ. ಇದು ಅದರ ಸಾರಾಂಶ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಮುಖ್ಯಮಂತ್ರಿಗಳು ಈಗ ಹೇಳಿದ ಹಾಗೆ ಜಿಲ್ಲಾಧಿಕಾರಿಗಳು ಮತ್ತು ಮೇಲ್ಪಟ್ಟ ಅಧಿಕಾರಿಗಳ ವರ್ತನೆ ಇದೆ. ಅದು ನನ್ನ ಅನುಭವ ಕೂಡ. ಆದರೆ ಕೆಳಮಟ್ಟದ ಅಧಿಕಾರಿಗಳು ಶಾಸಕರುಗಳೊಡನೆ ವರ್ತಿಸಿರುವ ವರ್ತನೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ವಿಶೇಷ ಲಕ್ಷ್ಯ ವಹಿಸಿದ್ದಾರೋ ಹೇಗೆ ?

ಶ್ರೀ ರಾಮಕೃಷ್ಣ ಹೆಗಡೆ.—ಯಾವುದಾದರೂ ನಿರ್ದಿಷ್ಟ ಉದಾಹರಣೆಯನ್ನು ಕೊಟ್ಟರೆ ಇಂತಹ ಅಧಿಕಾರಿ, ಇಂತಹ ದಿವಸ ಇಂತಹವರು ಹೋದಾಗ ಸೌಜನ್ಯದಿಂದ ನೋಡಲಿಲ್ಲ ಎಂಬುದನ್ನು ಹೇಳಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು.

ರಾಜ್ಯದಲ್ಲಿನ ಅರಣ್ಯ ವಿಭಾಗಗಳಲ್ಲಿ ಆನೆಗಳನ್ನು ಕೊಂದಿರುವ ಬಗ್ಗೆ

೫೫. ಶ್ರೀ ಜಿ. ರಾಜೂಗೌಡ (ಸನ್ನೂರು).—ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೪೭ರಿಂದ ೧೯೬೭ರವರೆಗೆ ರಾಜ್ಯದ ಯಾವ ಯಾವ ಅರಣ್ಯ ವಿಭಾಗಗಳಲ್ಲಿ ಆನೆಗಳ ಕೊಂಬನ್ನು ಕದ್ದು ಬೇರೆಲ್ಲಿ ಎಷ್ಟು ಆನೆಗಳನ್ನು ಗುಂಡಿಕ್ಕಿ ಕೊಂದಿದ್ದಾರೆ ?

ಆ) ಇವುಗಳ ಪೈಕಿ ಎಷ್ಟನ್ನು ಹುಡುಕಿ ಹಚ್ಚಲಾಗಿದೆ ?

ಇ) ಇಂತಹ ಕೃತ್ಯಗಳು ಇನ್ನು ಮುಂದೆ ನಡೆಯದಂತೆ ಸರ್ಕಾರ ಮಾಡಿರುವ ಏರ್ಪಾಡಿಕೆ ಕಾರ್ಯಕ್ರಮಗಳೇನು ?